ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ರಬಕವಿ–ಬನಹಟ್ಟಿ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ)

ಸಂಶೋಧನಾರ್ಥಿ

ಶ್ರೀಮತಿ ಸುನಂದಾ ಕ. ಬಿರಾದಾರಪಾಟೀಲ

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಮಾರ್ಗದರ್ಶಕರು

ಡಾ. ಎಂ. ನಾಗರಾಜ

ಸಹ ಪ್ರಾಧ್ಯಾಪಕರು

□□□□□ □□□□□□ □□□□□

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

೨೦೨೪–೨೫

1) ಪ್ರಸ್ತಾವನೆ intruduction

2)ವಿಷಯದ ಪೂರ್ವವಲೂಕನ survey of literature

3) ಅಧ್ಯಯನದ ವ್ಯಾಪ್ತಿ significance of the study

4) ಅಧ್ಯಯನದ ಮಹತ್ವ significance of the study

5) ಅಧ್ಯಯನದ ಉದ್ದೇಶಗಳು objectives of the study

6) ಸಂಶೋಧನಾ ವಿಧಾನಗಳು methodology of the study

7) ಅಧ್ಯಾಯಗಳು ಮತ್ತು ಅಧ್ಯಾಯ ಯೋಜನೆ chapters and chapterization

8)ಸಮಾರೋಪ conclusion.

*ಅನುಬಂಧಗಳು

*ಪರಾಮರ್ಶನ ಗ್ರಂಥಗಳು

ರಬಕವಿ- ಬನಹಟ್ಟಿ ಸಾಂಸ್ಕೃ ತಿಕ ಅಧ್ಯಯನ

1) ಪ್ರಸ್ತಾವನೆ:

ಒಂದು ನಾಡಿನ ಸಾಂಸ್ಕೃತಿಕ ಅಧ್ಯಯನ ವೆಂದರೆ ಕೇವಲ ಸಂಸ್ಕೃತಿಯ ಬಗ್ಗೆ ಚರ್ಚಿಸುವುದಕ್ಕೆ ಸೀಮಿತವಾಗಿಲ್ಲ. ಅಲ್ಲಿನ ಸ್ಥಳಿಯ, ಐತಿಹಾಸಿಕ, ಧಾರ್ಮಿಕ, ರಾಜಕೀಯ, ಧಾರ್ಮಿಕ ಚರಿತ್ರೆ, ಆಚಾರ ವಿಚಾರಗಳು ನಂಬಿಕೆ, ಜನಪದ ಕಲೆ, ಪ್ರವಾಸ ತಾಣಗಳು, ದೇವಾಲಯಗಳು ಮುಂತಾದ ಅಂಶಗಳು ಒಳಗೊಂಡಿದೆ. ಯಾವುದೇ ಒಂದು ಪ್ರದೇಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಕೇವಲ ರಾಜಕೀಯ ಧರ್ಮಗಳು ಮತ್ತು ಇತಿಹಾಸವನ್ನು ನೋಡದೆ ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲಾಗುತ್ತದೆ. ಸಾಂಸ್ಕೃತಿಕ ಅಧ್ಯಯನ ಎಂಬ ಪದ ಬಳಕೆ ಆಗಿರುವುದರಿಂದ ಸಂಸ್ಕೃತಿ ಎಂಬ ಪದದ ಅರ್ಥ ತಿಳಿಯಬೇಕಾಗಿದೆ. ಸಂಸ್ಕೃತಿ ಎಂದರೆ ಸರಳ ಭಾಷೆಯಲ್ಲಿ ಆಚಾರ ವಿಚಾರಗಳೆಂದು ಹೇಳುತ್ತಾರೆ.

ರಬಕವಿ ಬನಹಟ್ಟಿ ಎಂಬ ಅವಳಿ ನಗರಗಳು ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿ ಇವೆ. ಮೊದಲು ಜಮಖಂಡಿ ತಾಲೂಕಿನಲ್ಲಿ ಬನಹಟ್ಟಿ ನಗರವು ಇತ್ತು. 2018 ರಲ್ಲಿ ಅಧಿಕೃತವಾಗಿ ಜಮಖಂಡಿ ತಾಲೂಕಿನಿಂದ ವಿಭಜಣೆಯಾಗಿ ಇಂದು ರಬಕವಿ ಬನಹಟ್ಟಿ ಅವಳಿ ನಗರಗಳು ತಾಲೂಕು ಕೇಂದ್ರವಾಗಿ ಪರಿವರ್ತನೆಯಾಗಿದೆ. ಈ ನಗರದಲ್ಲಿ ಸಾಂಸ್ಕೃತಿಕವಾಗಿ ಹಲವು ವೈವಿದ್ಯಾಗಳು ತಾಲ್ಲೂಕಿನಲ್ಲಿ ಕಂಡುಬರುತ್ತವೆ.

2) ವಿಷಯದ ಪೂರ್ವವಲೋಕನ (survey of literature)

ಸಾಂಸ್ಕೃತಿಕ ಅಧ್ಯಯನ ಲೇಖಕರು : ರೆಹಮತ ತರೀಕೆರಿ ಪ್ರಧಾನ ಸಂಪಾದಕರು : ರವಿಕುಮಾರ್ ರಾಮ ತರೀಕೆರೆ ಅವರು ರಚಿಸಿರುವ ಈ ಕೃತಿಯಲ್ಲಿ ಕನ್ನಡದಲ್ಲಿ

ಸಂಸ್ಕೃತಿಕ ಅಧ್ಯಾಯಗಳು ಹೀಗೆ ನಡೆದು ಬಂದಿವೆ. ಹಾಗೂ ಹೇಗೆ ಹೊಸ ಹೊಸ ನತಿರುವು ಪಡೆದುಕೊಂಡು ಬಂದಿವೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತಿಯೆಂಬುವುದು ಸಾಹಿತ್ಯ ಭಾಷೆ ಜನಪದ ಸಾಹಿತ್ಯ ಸಮಾಜಶಾಸ್ತ್ರಗಳಲ್ಲಿ ಅಧ್ಯಯನ ಮಾಡುವ ಮಾನವಿಕ ಹಾಗೂ ಸಮಾಜ ಸಮಾಜ ವಿಜ್ಞಾನದ ಪ್ರಾಥಮಿಕ ಹಂತ ಎಂಬುದನ್ನು ತಿಳಿಸುತ್ತಾರೆ. ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳುವ ಹೊಸ ತಲೆಮಾರಿನ ಸಂಶೋಧಕರಿಗೆ ಹೊಸ ಸಂಶೋಧನಾ ವಿಧಾನಗಳನ್ನು ಈ ಕೃತಿ ತಿಳಿಸುತ್ತದೆ. ಕನ್ನಡದಲ್ಲಿ ಸಾಂಸ್ಕೃತಿಕ ಅಧ್ಯಯನಗಳು ಜ್ಞಾನ ಶಿಸ್ತಿನ ಎರಡು ಕ್ಷೇತ್ರಗಳಲ್ಲಿ ನಡೆದಿವೆ. ಒಂದು ಮಾನವಿಕ ಕ್ಷೇತ್ರದ ಸಾಹಿತ್ಯ ಭಾಷೆ ಜಾನಪದ ಇತ್ಯಾದಿ ಶಿಸ್ತುಗಳಲ್ಲಿ ಇನ್ನೊಂದು ಸಮಾಜ ವಿಜ್ಞಾನ ಕ್ಷೇತ್ರದ ಸಮಾಜಶಾಸ್ತ್ರ, ಚರಿತ್ರೆ ಮಾನವ ಶಾಸ್ತ್ರ, ತತ್ವಶಾಸ್ತ್ರಗಳಲ್ಲಿ ಚರ್ಚಿಸುತ್ತದೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

3) ಉದ್ದೇಶ :

ಒಂದು ನಿರ್ದಿಷ್ಟ ವ್ಯಾಪ್ತಿಯ ಪ್ರದೇಶದ ಅಧ್ಯಯನವನ್ನು ಸಂಸ್ಕೃತ ಹಿನ್ನೆಲೆಯಲ್ಲಿ ಅಮೃತವಾಗಿರುವುದರಿಂದ ಅಧ್ಯ ಯ ನ ಮಾಡಲಾಗುತ್ತದೆ. ರಬಕವಿ ಬನಹಟ್ಟಿ ತಾಲೂಕು ನೇಕಾರರ ತವರಾಗಿದ್ದು, ಕರ್ನಾಟಕದಲ್ಲಿ ಅತಿ ಹೆಚ್ಚು ಕೈಮಗ್ಗಗಳನ್ನು ಹೊಂದಿದ್ದು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಬನಹಟ್ಟಿಯ ಕೈಮಗ್ಗ ಸೀರೆಗಳು ಪ್ರಖ್ಯಾತಿಯನ್ನು ಹೊಂದಿವೆ. ಈ ಹಿನ್ನೆಲೆಯಿಂದ ಪ್ರಾಚೀನ ಪರಂಪರೆ ನಿರೂಪಿಸುವ ಉದ್ದೇಶ ಈ ಪ್ರಬಂಧಕ್ಕೆ ಇದೆ. ಮೊದಲು ಜಮಖಂಡಿ ತಾಲೂಕನ್ನು ಪ್ರಾಚೀನ ಕಾಲದಲ್ಲಿ ಪಟವರ್ಧನ ರಾಜವಂಶ ಆಳ್ವಿಕೆ ಮಾಡಿದ್ದು ಆದ್ದರಿಂದ ಈ ನಗರದಲ್ಲಿ ಮರಾಠಿ ಪ್ರಭಾವ ಇತ್ತು. ಪಟವರ್ಧನ ರಾಜರ ಆಳ್ವಿಕೆಯಿಂದ ಮರಾಠಿ ಪ್ರಭಾವ ತೊಡೆದು ಹಾಕಿ ಕನ್ನಡವನ್ನು ಉಳಿಸಬೇಕು ಎಂಬ ಛಲದಿಂದ ಹೋರಾಟ ಮಾಡಿ ಸತತವಾದ ಪ್ರಯತ್ನ ಮಾಡಿದರು. ಅದರ ಫಲವಾಗಿ ಇಂದು ಬನಹಟ್ಟಿ ಊರು ತಾಲೂಕು ಕೇಂದ್ರವಾಗಿ ಮಾರ್ಪಡಿಸಲು ಸಾಧ್ಯವಾಯಿತು. ಬಾಗಲಕೋಟೆ ಜಿಲ್ಲೆಗೆ ಕುರಿತಾದ ಹಲವಾರು ಅಧ್ಯಯನಗಳು ನಡೆದಿದ್ದು ಬನಹಟ್ಟಿ ರಬಕವಿ ಸೀಮಿತವಾಗಿ ಯಾವುದೇ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಈ ತಾಲೂಕಿನ ಮೂಲಕ ಹೊಸ ರೀತಿಯ ಸಂಶೋಧನೆ ನಡೆಸುವ ಉದ್ದೇಶ ಈ ಪ್ರಬಂಧವಾಗಿದೆ.

4) ವ್ಯಾಪ್ತಿ:

ಇತಿಹಾಸ ಮತ್ತು ಭೌಗೋಳಿಕ ತಾಲೂಕು ಪ್ರಭಾವಕ್ಕೆ ಒಳಗಾಗಿರುವುದರಿಂದ ಪ್ರಾಕೃತಿಕ ಅಂಶಗಳ ಪರಿಚಯವಿಲ್ಲದ ಅಧ್ಯಯನವೇ ಅಪೂರ್ಣವಾದದ್ದು. ರಬಕವಿ ಬನಹಟ್ಟಿ ತಾಲೂಕಿನಲ್ಲಿ ರಾಂಪುರ್, ತೇರದಾಳ್, ಜಗದಾಳ, ಆಸಂಗಿ, ಹೊಸೂರು, ಯ ಲ್ಲಟ್ಟಿ, ನಾವಲಗಿ ಮಹಾಲಿಂಗಪುರ ಎಂಬ ಗ್ರಾಮಗಳು ಬರುತ್ತವೆ. ರಬಕವಿ ಬನಹಟ್ಟಿ ಎಂಬ ಅವಳಿ ನಗರಗಳು ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿ ಇವೆ. ಮೊದಲ ಜಮಖಂಡಿ ತಾಲೂಕಿನಲ್ಲಿ ಬನಹಟ್ಟಿ ನಗರ ವು ಇತ್ತು. 2018 ರಲ್ಲಿ ಅಧಿಕೃತವಾಗಿ ಜಮಖಂಡಿ ತಾಲೂಕಿನಿಂದ ವಿಭಜನೆಯಾಗಿ ಇಂದು ರಬಕವಿಕನಹಟ್ಟಿ ಅವಳಿ ನಗರಗಳು ತಾಲೂಕು ಕೇಂದ್ರವಾಗಿ ಪರಿವರ್ತನೆಯಾಗಿದೆ. ಈ ನಗರದಲ್ಲಿ ಸಾಂಸ್ಕೃತಿಕವಾಗಿ ಹಲವು ವೈವಿಧ್ಯತೆಗಳು ತಾಲೂಕಿನಲ್ಲಿ ಕಂಡುಬರುತ್ತದೆ.

5) ಅಧ್ಯಯನದ ವ್ಯಾಪ್ತಿ :

ಬನಹಟ್ಟಿ ನಗರದ ಸುತ್ತಲೂ ಬೆಟ್ಟಗಳು ಗುಡ್ಡಗಳು ದೇವಾಲಯಗಳು ಉತ್ತಮವಾದ ಪರಿಸರ ಇರುವುದರಿಂದ ಕಣ್ಣಿಗೆ ಆಹ್ಲಾದವನ್ನು ಉಂಟು ಮಾಡುತ್ತದೆ. ರಬಕವಿ ಬನಹಟ್ಟಿ ಅವಳಿ ನಗರವು ಮೂಲದಲ್ಲಿ ಕಾಡ ಸಿದ್ದೇಶ್ವರ ಮಹಾರಾಜರ ಮೂಲ ಸ್ಥಳವಾಗಿರುವುದರಿಂದ ಇಂದಿಗೂ ಬನಹಟ್ಟಿಯ ರಾಜ್ಯ ದೈವ ಶ್ರೀ ಕಾಡು ಸಿದ್ದೇಶ್ವರನೇ

ಆಗಿದ್ದಾನೆ. ಪ್ರತಿವರ್ತ ಶ್ರೀ ಕಾಡು ಸಿದ್ದೇಶ್ವರನ ಜಾತ್ರೆ ವಿಜೃಂಭಣೆಯಿಂದ ಜರುಗುತ್ತದೆ. ಬನಹಟ್ಟಿ ಎಂಬ ಪದವು ಮೂಲತ ವನ ಮತ್ತು ಹಟ್ಟಿ ಎಂಬ ಪದದಿಂದ ಉತ್ಪತ್ತಿಯಾಗಿದ್ದು ವಣ ಎಂದರೆ ಕಾಡು ಎಂದರ್ಥ ಹಟ್ಟಿ ಎಂದರೆ ಗುಡಿಸಲು ಅಥವಾ ಮನೆಗಳು ಎಂದರ್ಥ.. ಹಾಗಾಗಿ ಬನಹಟ್ಟಿಯಲ್ಲಿ ನೇಕಾರರು ತಮ್ಮ ಕೈಮಗ್ಗದ ನೂಲುಗಳಿಗೆ ಬಣ್ಣವನ್ನು ಹಾಕಿ ಸೀರೆಗಳನ್ನು ತಯಾರಿಸುವುದರಿಂದ ಬಣ್ಣ ಎಂಬ ಪದ ಬನ ಎಂದು ಕರೆಯಲ್ಪಟ್ಟಿತು. ಆದ್ದರಿಂದ ಇಂದಿಗೂ ಅದು ಬನಹಟ್ಟಿ ಎಂಬ ಹೆಸರು ಬರಲು ಕಾರಣವಾಯಿತು ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ಅಷ್ಟೇ ಅಲ್ಲದೆ ಕಾಡುಗಳಿಂದ ಅವೃತವಾದ ಈ ಪ್ರದೇಶದಲ್ಲಿ ಪ್ರಾಚೀನ ಕಾಲದಲ್ಲಿ ಋಷಿಮುನಿಗಳು ಕಾಡಿನಲ್ಲಿ ಬರುವಾಗ.

6) ಅಧ್ಯಾ ಯಗಳು ಹಾಗೂ ಅಧ್ಯಾಯ ಯೋಜನೆ :

ಮೊದಲನೇ ಅಧ್ಯಾಯವು ಪ್ರಸ್ತಾವನೆಯನ್ನು ಒಳಗೊಂಡಿದೆ. ರಬಕವಿ ಬನಹಟ್ಟಿ ಇತಿಹಾಸ ಎಂಬ ಎರಡನೇ ಅಧ್ಯಾಯದಲ್ಲಿ ರಬಕವಿ ಬನಹಟ್ಟಿ ಇತಿಹಾಸವನ್ನು ಕುರಿತು ಚರ್ಚಿಸಲಾಗಿದೆ. ಬನಹಟ್ಟಿ ಮತ್ತು ಮೂಲ ತಾಲೂಕದ ಜಮಖಂಡಿಗೂ ಇರುವ ಸಂಬಂಧವನ್ನು ಚರ್ಚಿಸಲಾಗಿದೆ. ಅಷ್ಟೇ ಅಲ್ಲದೆ ಬನಹಟ್ಟಿ ಸುತ್ತ ಮುತ್ತಲಿನ ಗ್ರಾಮದಲ್ಲಿರುವ ಐತಿಹಾಸಿಕ ಕೇಂದ್ರಗಳಿಗೆ ಭೇಟಿಕೊಡಲು ಯೋಚಿಸಲಾಗಿದೆ. ಐತಿಹಾಸಿಕ ಕೇಂದ್ರಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ರೂಪಿಸುವ ಒಂದು ಪ್ರಬಂಧ ಇದಾಗಿದೆ.

ರಬಕವಿ ವನಹಟ್ಟಿ ನಗರದ ರಾಜಕೀಯ ಇತಿಹಾಸ ಎಂಬ ಮೂರನೇ ಅಧ್ಯಾಯದಲ್ಲಿ ರಾಜಕೀಯ ಇತಿಹಾಸವನ್ನು ಚರ್ಚಿಸಲು ಯೋಚಿಸಲಾಗಿದೆ. ರಾಜಕಾರಣವು ತನ್ನದೇ ಆದ ಗುರು ತನ್ನ ಹೊಂದಿದ್ದು ಆದ್ದರಿಂದ ರಾಜಕೀಯ ಆಡಳಿತವನ್ನು ಅಧ್ಯಯನ ಮಾಡಬೇಕು ಎಂಬುದು ಪ್ರಬಂಧದ ಉದ್ದೇಶವಾಗಿದೆ. ಬನಹಟ್ಟಿ ರಬಕವಿ ಧಾರ್ಮಿಕ ಹಿನ್ನೆಲೆ ಎಂಬ ನಾಲ್ಕನೇ ಅಧ್ಯಾಯದಲ್ಲಿ ಧಾರ್ಮಿಕ ಚರಿತ್ರೆಯನ್ನು ಒಳಗೊಂಡಿದ್ದು ಬೌದ್ದ ಜೈನ ಶೈವ ವೈಷ್ಣವ ಎಂಬ ಪ್ರಾಚೀನ ಧರ್ಮಗಳು ಕಂಡುಬರುತ್ತವೆ. ಆ ಧರ್ಮಗಳ ಕುರಿತು ಅಧ್ಯಯನ ಮಾಡುವ ಉದ್ದೇಶ ಈ ಪ್ರಬಂಧಕ್ಕೆ ಇದೆ.

ರಬಕವಿ ಬನಹಟ್ಟಿ ಪ್ರಾಚೀನ ಕಾಲದ ದೇವಾಲಯಗಳು ಎಂಬ 5ನೇ ಅಧ್ಯಾಯದಲ್ಲಿ ಪ್ರಾಚೀನ ಕಾಲದ ದೇವಾಲಯಗಳ ಬಗ್ಗೆ ಕ್ಷೇತ್ರ ಅಧ್ಯಯನ ಮಾಡಲಾಗುತ್ತದೆ. ರಬಕವಿ ಬನಹಟ್ಟಿಯಲ್ಲಿ ಗು ಹಾತರ ದೇವಾಲಯಗಳು ಸಹ ಕಂಡುಬರುತ್ತದೆ. ಚಿಮ್ಮಡದ ಅಲ್ಲಮಪ್ರಭು ದೇವಸ್ಥಾನ, ಮಹಾಲಿಂಗಪುರದ ಮಹಾಲಿಂಗೇಶ್ವರ ದೇವಸ್ಥಾನ, ಬನಹಟ್ಟಿ ಶ್ರೀ ಕಾಡು ಸಿದ್ದೇಶ್ವರ ದೇವಸ್ಥಾನ, ನಾವಲಗಿ ಹನುಮಾನ್ ಮಂದಿರ, ತೇರದಾಳದ ಅಲ್ಲಮಪ್ರಭು ದೇವಸ್ಥಾನ, ರಬಕವಿಯ ಶಿವನ ದೇವಾಲಯ ಹೀಗೆ ಮುಂತಾದ ದೇವಾಲಯಗಳನ್ನು ಅದೇನು ಮಾಡಲು ಯೋಚಿಸಲಾಗಿದೆ. ಅಷ್ಟೇ ಅಲ್ಲದೆ ಕಲ್ಲಿನ ಮೇಲೆ ಉದ್ಭವವಾದ ಮೂರ್ತಿಗಳು ಗೋಪುರಗಳು, ಅಗ್ರಹಾರಗಳನ್ನು ಕಾಣುತ್ತೇವೆ.

ಪುರಾತನ ಕಾಲದಿಂದಲೂ ಜನರು ಸುಖ ಶಾಂತಿಯಿಂದ ಬದುಕಲು ಭಾರತೀಯ ಸಂಸ್ಕೃತಿ ಪರಂಪರೆಯಂತೆ ಧಾರ್ಮಿಕ ಆಚರಣೆ ಮತ್ತು ದೇವಾಲಯಗಳನ್ನು ಒಟ್ಟುಗೂಡಿಸಿ ಸುಖಕರ ಜೀವನಕ್ಕೆ ದಾರಿ ದೀಪವಾಗಿದೆ.

ರಬಕವಿ ಬನಹಟ್ಟಿ ಪರಿಸರದ ಜನಪದ ಕಲೆಗಳು ಎಂಬ ಆರನೇ ಅಧ್ಯಾಯದಲ್ಲಿ ರಬಕವಿ ಬನಹಟ್ಟಿ ವಿಶೇಷವಾಗಿ ಜನಪದ ಕಲೆಗೆ ಹೆಸರಾಗಿದೆ. ಇಲ್ಲಿ ಅನೇಕ ಪ್ರಕಾರದ ಜಾನಪದ ಕಲೆಗಳು ಅನಾವರಣಗೊಂಡಿದೆ. ಅದಕ್ಕಾಗಿ ನಾವು ಇಂದು ಜನಪದ ಲೋಕವನ್ನು ಕಾಣಬಹುದಾಗಿದೆ. ಜಾನಪದ ಕಲೆಗಳ ಸಂಗ್ರಹವಿದೆ. ಜಾನಪದ ಗಾಯನದಲ್ಲಿ ಹಲವಾರು ವ್ಯಕ್ತಿಗಳು ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯಕ್ಕಾಗಿ ಜಾನಪದ ಕಲೆಗಳನ್ನು ಅವಲಂಬಿಸಿದ್ದಾರೆ. ತಮ್ಮ ಕಲೆಗಳ ಪ್ರದರ್ಶನಕ್ಕೆ ಬೇಕಾದ ವಾದ್ಯ ಪರಿಕರಗಳನ್ನು ತಾವೇ ಸ್ವತ ನಿರ್ಮಿಸಿಕೊಳ್ಳುತ್ತಾರೆ. ಜಗದಾಳ ಮತ್ತು ನಾವಲಗಿ ಗ್ರಾಮಗಳಲ್ಲಿ ತಮಟೆ, ಪೂಜಾ ಕುಣಿತ, ವೀರಗಾಸೆ, ಪಟ್ಟದ ಕುಣಿತ, ವೀರಗಾಸೆ, ನೀಲಗಾರರ ಪದ, ಗೊರವರ ಕುಣಿತ, ಲಂಬಾಣಿ ಕುಣಿತ, ಚೌಡಕಿ ಮೇಳ, ಗಿಗಿ ಪದ ಸಾಂಬಾಳ ಪದಗಳು, ಲಂಬಾಣಿ ಪದಗಳು ಡೊಳ್ಳು ಕುಣಿತಗಳು, ಹೀಗೆ ಹಲವಾರು ರೀತಿಯ ಜನಪದ ಕಲೆಗಳನ್ನು ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

ಅದರ ಜೊತೆಗೆ ಜಾತ್ರೆಗಳಲ್ಲಿ ಏರ್ಪಡಿಸುವ ಕಾಳಗಗಳ ಬಗ್ಗೆ, ಕಲೆಗಳ ಬಗ್ಗೆ, ಸಂಪ್ರದಾಯಗಳ ಬಗ್ಗೆ, ಆಚರಣೆಗಳ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ, ಅವಲೋಕಿಸುವ ಉದ್ದೇಶವನ್ನು ಹೊಂದಲಾಗಿದೆ.

ರಬಕವಿ ಬನಹಟ್ಟಿ ಪರಿಸರದ ಪ್ರೇಕ್ಷಣೀಯ ಸ್ಥಳಗಳು ಎಂಬ ಏಳನೇ ಅಧ್ಯಾಯದಲ್ಲಿ ರಬಕವಿ ಬನಹಟ್ಟಿ ತಾಲೂಕಿನ ರಚನೆಯ ಸ್ಥಳಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗುತ್ತದೆ. ಈ ತಾಲೂಕಿನ ಬರುವ ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತದೆ.

ರಬಕವಿ ಬನಹಟ್ಟಿ ತಾಲೂಕಿನ ಶೈಕ್ಷಣಿಕ ಹಿನ್ನೆಲೆ ಎಂಬ ಎಂಟನೇ ಅಧ್ಯಾಯದಲ್ಲಿ ಬನಹಟ್ಟಿಯಲ್ಲಿ ತಮ್ಮನಪ್ಪ ಚಿಕ್ಕೋಡಿಯವರ ಹೋರಾಟದ ಫಲವಾಗಿ ಪ್ರೌಢಶಾಲೆ ಸ್ಥಾಪನೆ ಆಯಿತು.

ಪ್ರಾಥಮಿಕ ಶಾಲೆಗೆ ಪ. ಗು. ಹಳಕಟ್ಟಿ ಶಾಲೆ ಎಂದು ನಾಮಕರಣ ಮಾಡಲಾಗಿದೆ. ಇಂದು ತಮ್ಮನ್ನಪ್ಪ ಚಿಕ್ಕೋಡಿ ಅವರ ಹೋರಾಟದ ಫಲವಾಗಿ ಪದವಿ ಕಾಲೇಜಿಗೆ ರೀ ತಮ್ಮಣ್ಣಪ್ಪ ಚಿಕ್ಕೋಡಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಎಂದು ನಾಮಕರಣ ಮಾಡಲಾಯಿತು. ಅದೇ ತರನಾಗಿ ಮಹಾಲಿಂಗಪುರದಲ್ಲಿ ಪ್ರಸಿದ್ದವಾದ ಕರ್ನಾಟಕ ಲಿಂಗಾಯತ ಸಂಸ್ಥೆಯ ಪ್ರಾಥಮಿಕ ಮಾಧ್ಯಮಿಕ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳು ಸಹ ಸ್ಥಾಪನೆಯಾಗಿ ಅನೇಕ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳು ಸ್ಥಾಪನೆಯಾದವು. ಈ ಭಾಗದ ಶೈಕ್ಷಣಿಕ ಬರವನ್ನು ನೀಗಿಸುವಲ್ಲಿ ಈ ಶಿಕ್ಷಣ ಸಂಸ್ಥೆಗಳು ಪ್ರಮುಖವಾದ ಪಾತ್ರವನ್ನು ವಹಿಸಿವೆ.

ಬನಹಟ್ಟಿ ರಬಕವಿ ಪರಿಸರದ ಸಾಹಿತಿಕ ಹಿನ್ನೆಲೆ ಎಂಬ ಒಂಬತ್ತನೇ ಅಧ್ಯಾಯದಲ್ಲಿ ಸಾಹಿತಿಕವಾಗಿ ಅಧ್ಯಯನ ಮಾಡುವುದಾದರೆ ಸಾಕಷ್ಟು ಕವಿಗಳು ತಮ್ಮ ಕೃತಿಗಳನ್ನು ಬರೆಯುವುದರ ಮುಖಾಂತರ ಬನಹಟ್ಟಿ ರಬಕವಿ ಕ್ಷೇತ್ರವನ್ನು ಶ್ರೀಮಂತವಾಗಿಸಿದ್ದಾರೆ. ಅಷ್ಟೇ ಅಲ್ಲದೆ ಅಪಾರ ಪ್ರಮಾಣದ ಸಾಹಿತ್ಯ ಕೃಷಿಯನ್ನು ಮಾಡುವುದರ ಮೂಲಕ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಬನಹಟ್ಟಿಯ ಶ್ರೇಷ್ಠ ಕವಿಯಾದ ದು. ನಿ. ಬೆಳಗಲಿ ಕಾಪಾಡು ಕೂಡಲಸಂಗಮದೇವ, ಬೆನ್ನ ಹಿಂದಿನ ಕಣ್ಣು, ಹೆಂಡತಿ ಮತ್ತು ಟ್ರಾನ್ಸ್ ಸಿಸ್ಟರ್, ಮಹಾಶಿವಯೋಗಿಗಳು,. ಹೀಗೆ ಮುಂತಾದ ಕೃ ತಿಗಳನ್ನು ರಚಿಸಿದ್ದಾರೆ. ಇವರಿಗೆ ಸಿಂಪಿ ಲಿಂಗನ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ.

200 ಕವಿಗಳಾದ ಪ್ರೊಫೆಸರ್ ಬಿ ಆರ್ ಪೊಲೀಸ್ ಪಾಟೀಲ್ ನಾನು ಎಂಬುದು ನಾನಲ್ಲ, ಬೂದಿ ಮತ್ತು ಕೆಂಡ, ಎಂಥ ಚಂದ ಹಿಂದುಸ್ತಾನ, ಸಂಗೋಳಿ ತಂಬೋಳಿ, ಸಂಕಟನ ಸೇವೆ ಸಂಕಟನ ಸಿರಿ,ಹೀಗೆ ಮುಂತಾದ ಕೃತಿಗಳನ್ನು ರಚಿಸುವುದರ ಮುಖಾಂತರ ಸಿಂಪಿಲಿಂಗನ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಡಾ. ಸ.ಜ ನಾಗಲೋಟಿ ಮಠರು ಬಿಚ್ಚಿದ ಜೋಳಿ ಗೆ ಎಂಬ ಆತ್ಮಕಥೆಯ ಮೂಲಕ ಹೆಸರಾದವರು. ಮೂಲತಃ ಎಂಬಿಬಿಎಸ್ ಮುಗಿಸಿ ಹುಬ್ಬಳ್ಳಿಯ ಕೀ ಮ್ ಆಸ್ಪತ್ರೆಯಲ್ಲಿ ಹೆಸರಾಂತ ವೈದ್ಯರಾಗಿದ್ದರು. ವೈದ್ಯ ವೃತ್ತಿಯಲ್ಲಿದ್ದರೂ ಸಾಹಿತ್ಯ ಲೋಕಕ್ಕೆ ಉತ್ತಮ ಕೊಡುಗೆಯನ್ನು ಕೊಟ್ಟಿದ್ದಾರೆ. ಕುಷ್ಟರೋಗದ ಬಗ್ಗೆ ಅಪಾರಜ್ಞಾನ ಹೊಂದಿದ ಇವರು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದರು. ಬೆಳಗಾವಿಯಲ್ಲಿ ಮ್ಯೂಸಿಯಂ ಸ್ಥಾಪಿಸಿ ಇಂದಿಗೂ ತಮ್ಮ ಹೆಸರು ಅಜರಾಮರವಾಗಿ ಉಳಿಸಿಕೊಂಡಿದ್ದಾರೆ.

ಮತ್ತೋರ್ವ ಕವಿಗಳಾದ ಜಯವಂತ ಕಾಡದೇವರವರು ರಚಿಸಿರುವ ವೈದ್ಯ ಸದಾಶಿವ ಸಜನ್ ನಾ ಗ ಲೊಟಿ ಮಠ ಸಾನಿಧ್ಯ ಸುಯೋಗ ಮುಂತಾದ ಕಿವಿಗಳನ್ನು ರಚಿಸಿದ್ದಾರೆ.

ಅದೇ ರೀತಿ ಮಲ್ಲಿಕಾರ್ಜುನ್ ಹುಲಗ ಬಾಳಿಯವರು ಬನಹಟ್ಟಿ ಲೇಖಕರಲ್ಲಿ ಇವರು ಒಬ್ಬರು. ಹೀಗೂ ಇದ್ದರೆ ಅರ್ಜುನ್ ಕೊರಟ್ಕರ್, ಜನರಲ್ ಬೋಗಿಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಹತ್ತನೇ ಅಧ್ಯಾಯವು ಸಮಾರೋಪವನ್ನು ಒಳಗೊಂಡಿದ್ದು ಪ್ರಸ್ತುತ ಅಧ್ಯಯನದಿಂದ ಕೊಂಡುಕೊಂಡ ಫಲಿತಗಳನ್ನು ನೀಡುವುದರ ಜೊತೆಗೆ ಅನುಬಂಧಗಳಲ್ಲಿ ಪ್ರಾಥಮಿಕ ಹಾಗೂ ಪೂರಕ ಪರಾಮರ್ಶನ ಗ್ರಂಥಗಳ ಪಟ್ಟಿ, ಅನುಬಂಧಗಳು, ಛಾಯಾಚಿತ್ರಗಳು, ನಕ್ಷೆಗಳು, ಕ್ಷೇತ್ರ ಕಾರ್ಯದ ವಿವರ, ವ್ಯಕ್ತಿ ವಿವರಗಳನ್ನು ನೀಡಲಾಗಿದೆ